**ENERGY & WETLANDS RESEARCH GROUP**
**CENTRE FOR ECOLOGICAL SCIENCES**
INDIAN INSTITUTE OF SCIENCE
BANGALORE 560 012, INDIA
http://ces.iisc.ernet.in/energy

**ಪರಿಸರ ವಿಜ್ಞಾನ ಕೇಂದ್ರ ಭಾರತೀಯ ವಿಜ್ಞಾನ ಸಂಸ್ಥೆ**
**ಶ್ರೀ ಸ್ವರ್ಣವಲ್ಲೀ ಸೇವಾ ಪ್ರತಿಷ್ಠಾನ & ವೃಕ್ಷಲಕ್ಷ ಆಂದೋಲನ ಕರ್ನಾಟಕ**

=========================================

# ಪಶ್ಚಿಮಘಟ್ಟದ ಕೆರೆಗಳ ಸಂರಕ್ಷಣೆ ಕುರಿತ ವಿಚಾರ ಸಂಕಿರಣ,

## ಆಹ್ವಾನ

**ದಿನಾಂಕ : 29-10-2014, ಮಧ್ಯಾಹ್ನ 3.00 ಘಂಟೆ**
**ಸ್ಥಳ: ಚೌಕ್ಸಿ ಹಾಲ್ ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು**

ಸನ್ಮಾನ್ಯರೇ,

ವಂದನೆಗಳು,

**29-10-2014 ರಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ನಡೆಯುವ ವಿಚಾರ ಸಂಕಿರಣಕ್ಕೆ ತಮ್ಮನ್ನು ಆಹ್ವಾನಿಸುತ್ತಿದ್ದೇವೆ.**

**ವಿಷಯ : ಪಶ್ಚಿಮಘಟ್ಟದ ಕೆರೆಗಳು ಹಾಗೂ ಜಲಮೂಲಗಳ ಸಂರಕ್ಷಣೆ ಕುರಿತು ವಿಚಾರ ಸಂಕಿರಣ ನಡೆಯಲಿದೆ.**

**ಹಿನ್ನೆಲೆ** : ನವೆಂಬರ 2ನೇವಾರ ಉ.ಕ ಜಿಲ್ಲೆಯ ಶಿರಸಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಕೆರೆ ಸಮ್ಮೇಳನ 2014 ಹಿನ್ನೆಲೆಯಲ್ಲಿ ಅಕ್ಟೋಬರ್ 29 ರ ವಿಚಾರ ಸಂಕಿರಣ ಬೆಂಗಳೂರಲ್ಲಿ ಆಯೋಜಿತವಾಗಿದೆ. ಪಶ್ಚಿಮಘಟ್ಟದ ಜಲಮೂಲಗಳ ಪ್ರಚಲಿತ ಸ್ಥಿತಿ-ಗತಿ ಬಗ್ಗೆ ಚರ್ಚಿಸುವ ಉದ್ದೇಶವನ್ನು ವಿಚಾರ ಸಂಕಿರಣ ಹೊಂದಿದೆ. ನವೆಂಬರ್‌ನಲ್ಲಿ ನಡೆಯಲಿರುವ ಕೆರೆ ಸಮ್ಮೇಳನ ವಿವರಗಳು ಈ ವಿಚಾರ ಸಂಕಿರಣದಲ್ಲಿ ಪ್ರಕಟವಾಗಲಿವೆ.

**ಪಾಲ್ಗೊಳ್ಳುವ ಗಣ್ಯರು ಹಾಗೂ ಕಾರ್ಯಕ್ರಮ ವಿವರ :**
ಹಸಿರು ಸ್ವಾಮೀಜಿ ಎಂದೇ ಖ್ಯಾತರಾಗಿರುವ ಶ್ರೀಮದ್‌ಜಗದ್ಗುರುಶಂಕರಾಚಾರ್ಯ ಶ್ರೀಮದ್‌ಗಂಗಾಧರೇಂದ್ರ ಸರಸ್ವತೀ ಮಹಾ ಸ್ವಾಮಿಗಳು ಶ್ರೀ ಸ್ವರ್ಣವಲ್ಲೀ ಮಹಾ ಸಂಸ್ಥಾನ ಸೋಂದಾ ಶಿರಸಿ ಇವರ ದಿವ್ಯ ಸಾಂನಿಧ್ಯದಲ್ಲಿ ವಿಚಾರ ಸಂಕಿರಣ ನಡೆಯಲಿದೆ. ಮಾನ್ಯ ಶಾಸಕರಾದ ಶ್ರೀ ಸುರೇಶ್‌ಕುಮಾರ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಬೆಂಗಳೂರಿನ ವೃಕ್ಷಗಳು ಕುರಿತು ಡಾ|| ಟಿ.ವಿ ರಾಮಚಂದ್ರ ತಂಡ ಕೈಗೊಂಡ ಅಧ್ಯಯನ ವರದಿಯನ್ನು ಶ್ರೀ ಸುರೇಶ್‌ಕುಮಾರ್ ಅವರು ಬಿಡುಗಡೆ ಮಾಡಲಿದ್ದಾರೆ. ರಾಜ್ಯ ಜೀವ ವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿ ಶ್ರೀ ಆರ್. ಕೆ. ಸಿಂಗ್ ಕೆರೆ ಸಮ್ಮೇಳನ ಬ್ರೋಶರ್ ಬಿಡುಗಡೆ ಮಾಡಲಿದ್ದಾರೆ. ಉ.ಕ ಜಿಲ್ಲೆಯ ಪರಿಸರ ಧಾರಣಾ ಸಾಮರ್ಥ್ಯ ಅಧ್ಯಯನ ನಡೆಸಿರುವ ವಿಜ್ಞಾನಿ ಡಾ|| ಟಿ.ವಿ ರಾಮಚಂದ್ರ ಅವರು ಪಶ್ಚಿಮಘಟ್ಟದ ಜಲಮೂಲಗಳ ಪರಿಸ್ಥಿತಿಯ ಅವಲೋಕನ ಮಾಡಲಿದ್ದಾರೆ. ಪಶ್ಚಿಮಘಟ್ಟದ ಪ್ರಚಲಿತ ವಿದ್ಯಾಮಾನಗಳನ್ನು ಪಶ್ಚಿಮಘಟ್ಟ ಕಾರ್ಯಪಡೆಯ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ವಿಶ್ಲೇಷಣೆ ಮಾಡಲಿದ್ದಾರೆ. ಸ್ವಯಂ ಸೇವಾ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಸಂಶೋಧನಾ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ.

**ಸಂಘಟಕರು** : ಭಾರತೀಯ ವಿಜ್ಞಾನ ಸಂಸ್ಥೆಯ ಜೌಗು ಭೂಮಿ ಹಾಗೂ ಶಕ್ತಿ ಸಂಶೋಧನಾ ತಂಡ ಪರಿಸರ ವಿಜ್ಞಾನ ಕೇಂದ್ರ, ಶ್ರೀ ಸ್ವರ್ಣವಲ್ಲೀ ಸೇವಾ ಪ್ರತಿಷ್ಠಾನ ಬೆಂಗಳೂರು, ಹಾಗೂ ವೃಕ್ಷಲಕ್ಷ ಆಂದೋಲನ ಕರ್ನಾಟಕ ಇವರು ಸಂಯುಕ್ತವಾಗಿ ಈ ವಿಚಾರ ಸಂಕಿರಣ ಆಯೋಜನೆ ಮಾಡಿದ್ದಾರೆ.

**ವಿಚಾರ ಸಂಕಿರಣದ ದಿನಾಂಕ – ಸಮಯ – ಸ್ಥಳ**: ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಚೌಕ್ಸಿ ಹಾಲ್‌ನಲ್ಲಿ 29-10-2014 ಬುಧವಾರ ಮಧ್ಯಾಹ್ನ 3.00 ಘಂಟೆಗೆ ವಿಚಾರ ಸಂಕಿರಣ ನಡೆಯಲಿದೆ.

**ಸಂಪರ್ಕ ದೂರವಾಣಿ :** 080- 22933099, 9611164216 (Ganesh Hegde), 080-23648200

**ಪರಿಸರಾಸಕ್ತರೊಂದಿಗೆ ಬನ್ನಿ.**

ದಿನಾಂಕ : 15-10-2014

**ತಮ್ಮ ವಿಶ್ವಾಸಿ**

ಪ್ರೊ। ಎಂ.ಡಿ ಸುಭಾಶ್ಚಂದ್ರನ್
ಪರಿಸರ ವಿಜ್ಞಾನ ಕೇಂದ್ರ
ಭಾರತೀಯ ವಿಜ್ಞಾನ ಸಂಸ್ಥೆ
ಬೆಂಗಳೂರು

ಶ್ರೀ ಬಿ.ಹೆಚ್ ರಾಘವೇಂದ್ರ
ಸಂಚಾಲಕರು
ವೃಕ್ಷಲಕ್ಷ ಆಂದೋಲನ ಕರ್ನಾಟಕ
ಸಾಗರ 577401

ಶ್ರೀ ಎಂ.ಆರ್ ಹೆಗಡೆ
ನಿವೃತ್ತ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳು
ಹಾಗೂ ಅಧ್ಯಕ್ಷರು
ಶ್ರೀ ಸ್ವರ್ಣವಲ್ಲೀ ಸೇವಾ ಪ್ರತಿಷ್ಠಾನ ಬೆಂಗಳೂರು